# ಮೋಟಾ ಭಾಯಿ

ಮೂಲ ಹಿಂದೀ: **ಸ್ವಾಮಿ ಜಪಾನಂದ**

ಕನ್ನಡಕ್ಕೆ : **ರೂಪಶ್ರೀ ನಾಗರಾಜ್**

**ಕಾ**ಥಿಯಾವಾಡದಲ್ಲಿ (ಗುಜರಾತ್) ಸಂನ್ಯಾಸಿ ಈಗ ನಾಲ್ಕು ವರ್ಷ ಪೂರೈಸಿದ್ದನು. ಒಬ್ಬ ಕಾಟಿ ದರಬಾರದ ದಿವಾನ್ ಸಾಹೇಬರೊಂದಿಗೆ ಸಂನ್ಯಾಸಿಗೆ ಪರಿಚಯವಾಯಿತು ಮತ್ತು ಅಲ್ಪಕಾಲದಲ್ಲಿಯೇ ಗಾಢವಾದ ಸಂಬಂಧ ಬೆಸೆಯಿತು. (೧೯೨೯–೩೫). ಮನೆಯ 'ಮೋಟಾ ಭಾಯಿ' ಆಗಿದ್ದರು ಅವರು. (ದೊಡ್ಡ ಅಣ್ಣ ಅಥವಾ ಮನೆಯ ಯಾರು ಹಿರಿಯರಿರುತ್ತಾರೋ ಅವರು. ಕೆಲವು ಪರಿವಾರಗಳಲ್ಲಿ ತಂದೆಯನ್ನು ಮೋಟಾಭಾಯಿ ಎಂದು ಕರೆಯುವ ಪದ್ಧತಿ ಇದೆ.) ಸಂನ್ಯಾಸಿಯೂ ಅವರನ್ನು ಮೋಟಾಭಾಯಿ ಎಂದೇ ಕರೆಯುತ್ತಿದ್ದನು. ಸ್ವಭಾವತಃ ಪ್ರೀತಿಯ ಮತ್ತು ಉದಾರ ಮನಸ್ಸಿನವನಾಗಿದ್ದ ಮೋಟಾಭಾಯಿ ಸಾಕಷ್ಟು ಖರ್ಚನ್ನೂ ಮಾಡುತ್ತಿದ್ದರು ಮತ್ತು ಕೆಲವೊಮ್ಮೆಯಂತೂ ಆದಾಯಕ್ಕಿಂತ ಹೆಚ್ಚಿನ ಖರ್ಚಾಗುತ್ತಿದ್ದ ಕಾರಣ ಬಹಳ ಕಷ್ಟವೂ ಆಗುತ್ತಿತ್ತು. ನಾಲ್ಕನೇ ವರ್ಗದ ಸಣ್ಣ ರಾಜ್ಯ ಅದಾಗಿತ್ತು. ಮೋಟಾಭಾಯಿಯ ಕಠಿಣ ಪರಿಶ್ರಮ ಹಾಗೂ ಆರ್ಥಿಕ ಉದಾರತೆಯಿಂದಾಗಿ ಹೊಸ ದರ್ಬಾರ್ ಶ್ರೀ ಗದ್ದಿಗೆಯವರ ಮೇಲೆ ಸರ್ವಾಧಿಕಾರವನ್ನೂ ಗಳಿಸಿಕೊಂಡಿದ್ದರು. ದರಬಾರ್ ಶ್ರೀಯವರಂತೂ ಮೋಟಾಭಾಯಿಯವರ ಮನೆಯವರಂತೆಯೇ ಇದ್ದರು. ತನ್ನ ಮಗನಂತೆ ಎಂದರೆ ಅತಿಶಯೋಕ್ತಿಯೇನಾಗದು. ಅವರ ಮಕ್ಕಳೊಂದಿಗೆ ಇರುತ್ತಿದ್ದರು, ತಿಂದುಂಡು ಆನಂದದಿಂದ ಇರುತ್ತಿದ್ದರು. (ಮೋಟಾಭಾಯಿ ಜನ್ಮತಃ ಬ್ರಾಹ್ಮಣರಾಗಿದ್ದರು.) ಹಾಗಾಗಿ ಮೋಟಾಭಾಯಿಯ ಮನೆಯಲ್ಲಿ ಸಂನ್ಯಾಸಿಯ ಸ್ಥಾನವೂ ಗಟ್ಟಿಯಾಗಿತ್ತು. ಯಾವಾಗಲೂ ಕಾಳಜಿ ವಹಿಸುತ್ತ ಏನು ಬೇಕೋ ಯಾವ ವಸ್ತುವಿನ ಆವಶ್ಯಕತೆಯೋ, ಅದನ್ನು ಸಂತೋಷದಿಂದ ತಲುಪಿಸುತ್ತಿದ್ದರು. ಬಾರಿಬಾರಿಯೂ ಹೇಳುತ್ತಿದ್ದರು. 'ಇದರಲ್ಲಿ ಸಂಕೋಚ ಏಕೆ, ನೀವು ನನಗೇಕೆ ಹೇಳುವುದಿಲ್ಲ? ಯಾಕೆ ಕಷ್ಟ ಪಡುತ್ತೀರಿ? ಯಾವುದೇ ವಸ್ತುವಿನ ಆವಶ್ಯಕತೆ ಇದ್ದರೂ ಹೇಳಿ. ನನಗಲ್ಲದಿದ್ದರೆ, ಈ ಹುಡುಗರಲ್ಲಿ ಯಾರಿಗಾದರೂ ಹೇಳಿದರೆ ಸಾಕು, ಕಷ್ಟ ತೊಂದರೆ ತೆಗೆದುಕೊಳ್ಳಬೇಡಿ' ಎನ್ನುತ್ತಿದ್ದರು.

ಆಗ ಚಳಿಗಾಲವಾಗಿತ್ತು. ಸಾಕಷ್ಟು ಥಂಡಿಯ ವಾತಾವರಣ. ಮುಂಬಯಿಯಲ್ಲೂ ಆ ವರ್ಷ ಶೀತಗಾಳಿಯು ಜೋರಾಗಿದ್ದ ಕಾರಣ ಜನರು ಚಿಂತಿತರಾಗಿದ್ದರು. ಸಮುದ್ರ ತೀರದಲ್ಲಿ ಥಂಡಿ ಜಾಸ್ತಿ ಆಗದಿದ್ದ ಕಾರಣ, ಜನರು ಹೆಚ್ಚಿನ ಉಣ್ಣೆ ಬಟ್ಟೆಗಳನ್ನು ಇಟ್ಟುಕೊಳ್ಳುತ್ತಿರಲಿಲ್ಲ. ಆದರೆ ಆ ವರ್ಷವಂತೂ ಎಲ್ಲರೂ ಚಳಿಯಿಂದ ತತ್ತರಿಸಿದರು. ಉಣ್ಣೆ ವ್ಯಾಪಾರಿಗಳಂತೂ ಚೆನ್ನಾಗಿ ವ್ಯಾಪಾರ ಮಾಡಿಕೊಂಡರು.

ಮುಂಬಯಿಗೆ ಹೋಗಬೇಕಾಗಿತ್ತು, ಮನೆಯ ಎಲ್ಲರೂ ಹೋಗುತ್ತಿದ್ದರು. ಮೋಟಾಭಾಯಿ ಸಂನ್ಯಾಸಿಯನ್ನೂ ಜೊತೆಯಲ್ಲಿ ಹೊರಡಲು ಆಗ್ರಹಿಸಿದ. ಆದರೆ ಸಂನ್ಯಾಸಿಯ ಹತ್ತಿರ ದಪ್ಪನೆಯ ಕೋಟು ಅಥವಾ ಸ್ವೆಟರ್ ತರಹದ್ದು ಏನೂ ಇರಲಿಲ್ಲ. ಹಾಗಾಗಿ ಮನದಲ್ಲೇ ಸಂಕೋಚಪಟ್ಟುಕೊಳ್ಳುತ್ತಿದ್ದ. ಮನೆಯಲ್ಲಿ ದರ್ಜಿ ಬಂದು ಕುಳಿತಿದ್ದ, ರಾಜ್‌ಕೋಟ್ ಮಾರುಕಟ್ಟೆಯಲ್ಲಿ ಸಿಕ್ಕಿದ ಉತ್ತಮ ಉಣ್ಣೆಯ ಬಟ್ಟೆಗಳೆಲ್ಲವನ್ನೂ ಕೊಂಡು ತಂದಿದ್ದ. ಮನೆಯಲ್ಲಿ ಹುಡುಗರು ಮಕ್ಕಳು ಎಲ್ಲರೂ ಸೇರಿ ಸುಮಾರು ಐವತ್ತು ಜನರಿಗೆ ಬೆಚ್ಚಗಿನ ಬನಿಯನ್ ಅಥವಾ ಕೋಟು, ಯಾರಿಗೆ ಏನು ಇಷ್ಟವೋ ಅದನ್ನು, ನಾಲ್ಕು ಮಂದಿ ದರ್ಜಿಗಳು ಬೇಗ ಬೇಗನೇ ಹೊಲಿದುಕೊಡುತ್ತಿದ್ದರು.

ಅವರ ಒಬ್ಬ ಚಿಕ್ಕ ತಮ್ಮ ಬೇರೆ ಇರುತ್ತಿದ್ದ. ಅವರ ಹತ್ತು ಹನ್ನೊಂದು ಹುಡುಗರು ದಿನವೂ ಮೋಟಾಭಾಯಿಯ ಹತ್ತಿರ ಬರುತ್ತಲೇ ಇದ್ದರು. ಮೋಟಾ ಭಾಯಿ ನೋಡಿದರು, ಈ ಹುಡುಗರ ಮೈಮೇಲೆ ಮಾಮೂಲಿಯ ಬೆಚ್ಚಗಿನ ಬಟ್ಟೆ ಅಥವಾ ಹೊಲಿದ ಬಟ್ಟೆಗಳಿದ್ದವು. ''ಸರಿ, ಇವರೆಲ್ಲರಿಗೂ ಮೊದಲು ಕೋಟುಗಳನ್ನು ಹೊಲಿಸಿ, ನಂತರ ಮನೆಯವರಿಗೆ ಹೊಲಿದು ಕೊಡಿರಿ'' ಎಂದು ಹುಕುಂ ಕೊಟ್ಟರು. ಮನೆಯ ಸದ್ಗೃಹಿಣಿ, ಧರ್ಮಪತ್ನಿ ಇದರಿಂದ ಕೋಪಗೊಂಡಳು, ಹೇಳಿದಳು – ''ಇವರುಗಳು ಇಲ್ಲಿಯೇ ಇರುತ್ತಾರೆ, ನಂತರ ಹೊಲಿದರೂ ಆಗುತ್ತದೆ. ಆದರೆ ನಮಗೆ ಹೋಗಬೇಕಾಗಿದೆ, ಸಮಯವೂ ಬಹಳ ಕಮ್ಮಿ ಇದೆ.'' ಆದರೆ, ''ಇಲ್ಲ, ಇವರಿಗೇ ಮೊದಲು ಮಾಡಿಕೊಡಿ'' ಎಂದರು ಮೋಟಾ ಭಾಯಿ. ಏಕಾಂತದಲ್ಲಿ ಸಂನ್ಯಾಸಿಗೆ ಹೇಳಿದರು, ''ಸ್ವಾಮೀಜಿ, ಈ ಹುಡುಗರೆಲ್ಲರೂ ನೋಡುತ್ತಿದ್ದರು, ಅವರ ಹತ್ತಿರ ಒಳ್ಳೆಯ ಬೆಚ್ಚಗಿನ ಬಟ್ಟೆಗಳು ಇಲ್ಲ. ಪಾಪ ಚಿಕ್ಕ ಹುಡುಗರು, ಹಾಗಾಗಿ ನಾನು ಯೋಚಿಸಿದೆ, ನಮಗೆ ಕೊಡಲಿಲ್ಲವೆಂದು ದುಃಖಿತರಾಗುತ್ತಾರೆ. ಈ ರೀತಿ ಭೇದಭಾವ ಉಂಟಾಗುತ್ತಿತ್ತು. ಹಾಗಾಗಿ ಅವರಿಗೇ ಮೊದಲು ಹೊಲಿದು ಕೊಡಲು ಹೇಳಿದೆ.''

ಈಗೇನು ಹೇಳುವುದು? ಮತ್ತಿಬ್ಬರು ದರ್ಜಿಗಳನ್ನು ನೇಮಿಸಿ ಹೊಲಿಯುವ ಕೆಲಸವನ್ನು ಬೇಗನೆ ಶುರುಮಾಡಲಾಯಿತು. ಮಾರುಕಟ್ಟೆಯಲ್ಲಿ ಹುಡುಕಿದರು. ಮೊದಲಿನಂಥ ಬಟ್ಟೆ ಸಿಗಲಿಲ್ಲ, ಹಾಗಾಗಿ ಮಾಮೂಲಿ ಬೆಚ್ಚಗಿನ ಬಟ್ಟೆಯ ಥಾನನ್ನೇ ತಂದರು ಮತ್ತು ತಮ್ಮ ಮೊಮ್ಮಕ್ಕಳು ಹುಡುಗರು ಮತ್ತು ಸ್ವಯಂ ತಮಗೋಸ್ಕರ ಎಲ್ಲರಿಗಿಂತ ತಡವಾಗಿ ಮಾಡಿಸಿದರು. ಅವರು ಹೊರಡಬೇಕಾಗಿದ್ದ ದಿನಕ್ಕೆ ಒಂದೇ ದಿನ ಮುಂಚಿತವಾಗಿ ತಯಾರಾಯಿತು. ''ಅರೆ, ಇದೇನಿದು? ನಿಮ್ಮಲ್ಲಿ ಯಾರಿಗೂ ಗಮನಕ್ಕೆ ಬರಲಿಲ್ಲವೇ,

ಸ್ವಾಮೀಜಿಯವರ ಹತ್ತಿರ ಯಾವುದೇ ಬೆಚ್ಚಗಿನ ಬಟ್ಟೆ ಇಲ್ಲವೆಂದು? ಒಂದು ಕೋಟು ಬೇಕು ತಾನೆ? ನನಗಂತೂ ಮರೆತೇ ಹೋಯಿತು. ಆದರೇನು?'' ಎಂದು ಹೇಳಿ ಮೋಟಾಭಾಯಿ ಎದ್ದು, ಮನೆಯಲ್ಲಿ ತಮಗೋಸ್ಕರ ಮಾಡಿಸಿಕೊಂಡಿದ್ದ ಹೊಸ ಕೋಟನ್ನು ತಂದು, ಪ್ರೀತಿಯಿಂದ ಸಂನ್ಯಾಸಿಗೆ ತೊಡಿಸಿದರು.

ಕೋಟು ಸ್ವಲ್ಪ ದೊಡ್ಡದಾಗುತ್ತಿತ್ತು. ಹಾಗಾಗಿ ದರ್ಜಿಯನ್ನು ಕರೆಸಿ, ಅದನ್ನು ಕತ್ತರಿಸಿ ಸರಿ ಮಾಡಿಸಿದರು. ಸಂನ್ಯಾಸಿಯೂ ತುಂಬಾ ಸಲ ಹೇಳಿದ, ''ಇರಲಿ ಬಿಡಿ, ಮುಂಬಯಿಗೆ ಹೋಗಿ ಸ್ವೆಟರ್ ತೆಗೆದುಕೊಳ್ಳುತ್ತೇನೆ, ನಿಮಗೆ ಇದರ ಆವಶ್ಯಕತೆ ಹೆಚ್ಚಾಗಿ ಇದೆ.''

''ಇಲ್ಲ, ನನಗೇನೂ ಅಂಥಾ ಅವಸರವಿಲ್ಲ. ನಾನು ಮುಂಬಯಿಗೆ ಹೋಗಿ ಸ್ವೆಟರ್ ಅಥವಾ ಯಾವುದಾದರೂ ಬೆಚ್ಚಗಿನ ಬಟ್ಟೆ ಕೊಳ್ಳುತ್ತೇನೆ''.

ಒಂದು ತಿಂಗಳಿಗಿಂತಲೂ ಹೆಚ್ಚಿನ ಸಮಯ ಮುಂಬಯಿಯಲ್ಲಿದ್ದು, ವಾಪಸ್ ರಾಜಕೋಟ್‌ಗೆ ಬರಬೇಕೆಂದು ಮೊದಲೇ ನಿಶ್ಚಯವಾಗಿತ್ತು. ಇಷ್ಟರಲ್ಲಿ ಬಿಹಾರ್‌ನಲ್ಲಿ ಭೂಕಂಪದಿಂದ ಸಿಕ್ಕಾಪಟ್ಟೆ ಹಾನಿಯಾಯಿತು. ಖಾರ್‌ನ (ಮುಂಬಯಿ ರಾಮಕೃಷ್ಣ ಮಿಷನ್) ಸ್ವಾಮೀಜಿಯವರು ಈ ಸಂನ್ಯಾಸಿಯೊಂದಿಗೆ ವಿಚಾರಿಸಿದರು, ಅಹಮದಾಬಾದಿಗೆ ಹೋಗಿ ಸ್ನೇಹಿತರೊಂದಿಗೆ ಮಾತನಾಡಿ, ಅವರೇನಾದರೂ ಮಿಷನ್ನಿನ ಸೇವಾಕಾರ್ಯದಲ್ಲಿ ಸಹಾಯ ಮಾಡಬಹುದೇ ಎಂದು ಕೇಳಲು ಹೇಳಿದ್ದರು. ಸಂನ್ಯಾಸಿಯು ಹಾಗೆಯೇ ಪ್ರಯತ್ನವನ್ನು ಮಾಡಿದ ಮತ್ತು ಸ್ವಲ್ಪ ಮಟ್ಟಿಗೆ ಸಫಲನೂ ಆದ. ಒಬ್ಬ ದೊಡ್ಡ ನೇತಾರರ ಮೂಲಕ, ಆರ್ಥಿಕ ಸಹಾಯದ ನಿರ್ದೇಶನ ಬಾರಿಬಾರಿಗೂ ಬರುತ್ತಿತ್ತು. ಆದರೆ ಬಹಳಷ್ಟು ಜನ ವಚನ ಕೊಟ್ಟ ಮೇಲೂ ಹಿಂದಕ್ಕೆ ಸರಿದರು. ಇರಲಿ, ಅದು ಬೇರೆಯೇ ವಿಷಯ.

ಸದ್ಯದ ಕಾರ್ಯವಾದ ಮೇಲೆ ಅಹಮದಾಬಾದಿನಿಂದ ರಾಜ್‌ಕೋಟ್‌ಗೆ ಹೋಗಬೇಕಾಗಿತ್ತು. ಆದರೆ ಸಂನ್ಯಾಸಿಯ ಬಳಿ ರೈಲಿನ ಟಿಕೆಟಿಗೋಸ್ಕರ ದುಡ್ಡಿರಲಿಲ್ಲ. ಯಾರೂ ಖರ್ಚಿನ ಬಾಬ್ತಿನ ಬಗ್ಗೆ ಕೇಳದೇ ಹೋದರೆ, ಸಂನ್ಯಾಸಿಯು ಕಾಲ್ನಡಿಗೆಯಲ್ಲೇ ಹೋಗುವ ನಿಶ್ಚಯ ಮಾಡಿದ್ದ. ಅವನು ಉಳಿದುಕೊಂಡಿದ್ದ ಸಜ್ಜನರ ಮನೆಯಲ್ಲಿ ಎಲ್ಲರೂ ಸ್ನೇಹಮಯಿಗಳು, ತುಂಬಾ ಪ್ರೀತಿ ತೋರಿಸುತ್ತಿದ್ದರು. ಆದರೆ ಸಂನ್ಯಾಸಿಗೆ ನಿಯಮವಿತ್ತು – ಯಾರೂ ಕೇಳದ ಹೊರತು ಏನೂ ಕೇಳಬಾರದು ಎಂದು. ಹಾಗಾಗಿ ಯಾರೂ ಕೇಳದಿದ್ದ ಪಕ್ಷದಲ್ಲಿ ಕಾಲ್ನಡಿಗೆಯಲ್ಲೇ ರಾಜ್‌ಕೋಟ್‌ಗೆ ಹೋಗುವ ನಿಶ್ಚಯ ಮಾಡಿದ್ದ.

ಮೋಟಾಭಾಯಿ ಒಬ್ಬರೇ ರಾಜ್‌ಕೋಟ್‌ಗೆ ವಾಪಸ್ ಹೋಗುತ್ತಿದ್ದಾರೆ ಎಂದು ಟೆಲಿಗ್ರಾಂ ಬಂತು. ಜೊತೆಯಲ್ಲಿ ಹೊರಡುವ ತಯಾರಿ ಮಾಡಿಕೊಳ್ಳಬೇಕೆಂದು ಅದರಲ್ಲಿ ಹೇಳಿತ್ತು. ಆದರೆ ಈಗಲೂ ಭೂಕಂಪ ಪೀಡಿತರ ಸಹಾಯಕ್ಕಾಗಿ ಮುಖ್ಯಸ್ಥರೊಂದಿಗೆ ಮಾತನಾಡುವುದು ಉಳಿದಿತ್ತು. ಹಾಗಾಗಿ ಜೊತೆಯಲ್ಲಿ ಹೋಗುವುದು ಅಸಂಭವವಾಗಿತ್ತು. ಅವರು ಉಳಿದುಕೊಂಡಿದ್ದ ಮನೆಯ ಸಜ್ಜನರೂ ಸಹ ಮೋಟಾಭಾಯಿಯನ್ನು ಭೇಟಿ ಮಾಡಲು ಸಂನ್ಯಾಸಿಯೊಂದಿಗೆ ಸ್ಟೇಷನ್‌ಗೆ ಬಂದರು. ಮೊದಲಿಂದಲೂ ಅವರು ಪರಿಚಿತರಾಗಿದ್ದರು.

ಗಾಡಿ ಬಂತು, ಇಬ್ಬರೂ ಭೇಟಿಯಾದರು, ಮಾತುಕತೆ ನಡೆಯಿತು. ಫಂಡಿನ ಬಗ್ಗೆ ಪೂರ್ತಿ ಮಾಹಿತಿ ತೆಗೆದುಕೊಂಡರು – ಅಷ್ಟು ಹೊತ್ತಿಗೆ ಗಾಡಿ ಬರುವ ಸಮಯವಾಗಿತ್ತು. ಗಾರ್ಡ್ ಸಾಹೇಬ ಸೀಟಿ ಊದಿದ, ಗಾಡಿ ಹೊರಟಿತು. ಆಗ ಮೋಟಾಭಾಯಿ ಕಿಟಕಿಯಿಂದ ಕೇಳಿದರು, ''ಸ್ವಾಮೀಜಿ, ನಿಮ್ಮ ಹತ್ತಿರ ದುಡ್ಡಿದೆ ತಾನೆ?'' ಸಂನ್ಯಾಸಿಯು ನಕ್ಕು ಸುಮ್ಮನಾದ. ಅವರು ಕೂಡಲೇ ಹತ್ತು ರೂಪಾಯಿ ನೋಟನ್ನು ತೆಗೆದು, ''ತೊಗೊಳ್ಳಿ, ಇಟ್ಟುಕೊಳ್ಳಿ'' ಎಂದರು. ಗಾಡಿಯು ವೇಗವಾಗಿ ಹೊರಟಿತು, ಜೊತೆಯಲ್ಲಿ ಸಜ್ಜನರೂ ಓಡಿಹೋಗಿ ನೋಟನ್ನು ತೆಗೆದುಕೊಂಡರು. ಗಾಡಿ ಹೊರಟಿತು.

ಸಜ್ಜನರು ಹೇಳಿದರು – ''ಯಾಕೆ ಸ್ವಾಮೀಜಿ, ನಾವಂತೂ ಇದ್ದೀವಲ್ಲ, ನಿಮ್ಮ ಹತ್ತಿರ ದುಡ್ಡಿಲ್ಲದಿದ್ದರೆ ಹೇಳಬೇಕಾಗಿತ್ತು ಅಲ್ಲವೆ?''

''ಆದರೆ ಮಹಾಶಯರೇ, ಈಗಂತೂ ಅಗತ್ಯ ಇಲ್ಲವಲ್ಲ. ಈಶ್ವರನ ಕೃಪೆಯಿಂದ ಏನು ಬಂದಿತೋ ಅದು ಸಾಕು'' ಎಂದು ಹೇಳಿ ಸಂನ್ಯಾಸಿಯು ಮಾತನ್ನು ಬೇರೆಡೆಗೆ ಹೊರಳಿಸಿದ.

ಒಂದು ವಾರದ ನಂತರ ರಾಜ್‌ಕೋಟ್‌ಗೆ ತೆರಳಿ ಮೋಟಾಭಾಯಿಯನ್ನು ಭೇಟಿ ಮಾಡಲು ಹೋದಾಗ, ಅವರ ಕಿರಿಯ ತಮ್ಮ ಅಲ್ಲಿದ್ದರು. ಮನೆಗೆ ಒಳಬಂದ ಕೂಡಲೇ ಹೇಳಿದರು ''ಯಾಕೆ ಸ್ವಾಮೀಜಿ, ನಿಮಗೆ ಗೊತ್ತಾ, ಮೋಟಾಭಾಯಿ ಈ ಬಾರಿ ಮುಂಬಯಿಯಿಂದ ಬಂದಾಗ, ಎಂಥಾ ಕೆಟ್ಟ ಸ್ಥಿತಿಯಲ್ಲಿ ಬಂದರು ಅಂತ? ಅವರ ಹತ್ತಿರ ಹತ್ತು ರೂಪಾಯಿ ಇತ್ತು, ಅಹಮದಾಬಾದಿನಲ್ಲಿ ನಿಮಗೆ ಕೊಟ್ಟರು, ದಾರಿಯಲ್ಲಿ ಚಹಾವನ್ನೂ ಕುಡಿಯಲಿಲ್ಲ, ಏನೂ ತಿನ್ನಲಿಲ್ಲ. ಇಲ್ಲಿಗೆ ಬಂದಾಗ ನಾನು ಸ್ಟೇಷನ್‌ಗೆ ಕರೆತರಲು ಹೋದಾಗ ಅವರಲ್ಲಿ ಉಳಿದಿದ್ದ ಹಣ ಕೂಲಿಯವನಿಗೆ ಕೊಡಲು ಆಯಿತು''.

''ಅರೆರೆ, ಇದೇನು ಹೇಳುತ್ತಿದ್ದೀರಿ? ನನಗೆ ಹೇಗೆ ಗೊತ್ತಾಗಬೇಕು, ಅವರ ಹತ್ತಿರ ಹತ್ತು ರೂಪಾಯಿ ಮಾತ್ರವೇ ಇತ್ತು, ಅದನ್ನು ಅವರು ನನಗೆ ಕೊಟ್ಟಿದ್ದಾರೆ ಎಂದು? ಇಗ ನೀವು ಹೇಳಿದಾಗಲೇ ನನಗೆ ಗೊತ್ತಾಗಿದ್ದು. ನಾನು ಕೇಳಿಯೂ ಇರಲಿಲ್ಲ, ಗಾಡಿಯು ಹೊರಟ ಮೇಲೆ ಕಿಟಕಿಯಿಂದಲೇ ದುಡ್ಡನ್ನು ಕೊಟ್ಟಿದ್ದರು. ಅರೆ, ನನಗೋಸ್ಕರ ಇಷ್ಟೆಲ್ಲ ಕಷ್ಟ ಅನುಭವಿಸಿದರು, ಅಯ್ಯೋ ದೇವರೇ'' ಎಂದು ಉದ್ಗರಿಸುತ್ತಿರುವಾಗಲೇ, ಮೋಟಾಭಾಯಿ ನಗು ನಗುತ್ತಾ ಹೊರಗೆ ಬಂದು, ಸಂನ್ಯಾಸಿಯನ್ನು ಪ್ರೀತಿಯಿಂದ ತಬ್ಬಿಕೊಂಡರು.

ಇದರಲ್ಲಿ ಮಾನವತೆಯ ಎಳೆಯು ಸ್ಪಷ್ಟವಾಗಿ ಗೋಚರಿಸುತ್ತಿತ್ತು.